**<u>ದಿನಾಂಕಃ 16.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ 1ರಿಂದ 3ನೇ ಎದುದಾರರ ಪರ ಮಾನ್ಯ ವಕೀಲರಿಂದ.</u>**

ನಾನು ಸುಮಾರು 3 ವರ್ಷಗಳಿಂದ ಅರ್ಜಿದಾರರ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಪ್ರಮಾಣ ಪತ್ರವನ್ನು ನಾನೇ ಸಲ್ಲಿಸಿರುತ್ತೇನೆ. ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಸಲ್ಲಿಸಲಾದ ಪ್ರಮಾಣ ಪತ್ರವನ್ನು ಕಂಪನಿಯ ಮ್ಯಾನೇಜರ್ ಸಲ್ಲಿಸಿರುತ್ತಾರೆ. ಅವರ ಹೆಸರು ಸಂದೀಪ್. ಪ್ರಸ್ತುತ ಪ್ರಕರಣವನ್ನು ನಡೆಸಲು ಅಧಿಕಾರ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ಅಧಿಕಾರ ನೀಡಿದವರ ಹೆಸರು ನಮೂದು ಇಲ್ಲ ಎಂದರೆ ಸರಿಯಲ್ಲ. ಮೂಲ ಅರ್ಜಿಯ ಬಗ್ಗೆ ನನಗೆ ವಯಕ್ತಿಕ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ದಾಖಲಾತಿಗಳನ್ನು ನೋಡಿ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಮೂಲ ಅರ್ಜಿಯಲ್ಲಿ ನಮಗೆ ನೋಟೀಸು ಜಾರಿಯಾದ ಬಗ್ಗೆ ಅಮಲ್ಜಾರಿ ಅರ್ಜಿಯನ್ನು ಸಲ್ಲಿಸಿದ ನಂತರ ತಿಳಿದು ಬಂದಿರುತ್ತದೆ. ಮೂಲ ಅರ್ಜಿಯಲ್ಲಿನ ನೋಟೀಸು ಯಾರಿಯಾಗಿದ್ದರೂ ಸಹ ಜಾರಿಯಾಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 29.08.2022ರಂದು ಮೂಲ ಅರ್ಜಿಯ ನೋಟೀಸು ನಮಗೆ ಜಾರಿಯಾಗಿದ್ದು, ಮಾನ್ಯ ನ್ಯಾಯಾಲಯದಿಂದ ಏಕಪಕ್ಷೀಯ ಆದೇಶ ಆಗಿರುತ್ತದೆ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. 1 ರಿಂದ 3 ನೇ ಎದುರುದಾರರು ಚಾಲ್ತಿಯಲ್ಲಿರುವ ಅಮಲ್ಜಾರಿ ಅರ್ಜಿ ಸಲ್ಲಿಸುವ ಪೂರ್ವದಲ್ಲಿ ಮತ್ತೊಂದು ಅಮಲ್ಜಾರಿ ಅರ್ಜಿ ಸಲ್ಲಿಸಿದ್ದು, ಅದರಲ್ಲಿಯೂ ಸಹ ನಮಗೆ ನೋಟೀಸು ಜಾರಿಯಾಗಿರುತ್ತದೆ ಎಂದರೆ ಸರಿಯಲ್ಲ. ಮೂಲ ಅರ್ಜಿ ಮತ್ತು ಮೊದಲನೇ ಅಮಲ್ಜಾರಿ ಅರ್ಜಿಯಲ್ಲಿನ ನೋಟೀಸುಗಳು ನಮ್ಮ ಕಂಪನಿಯ ಕಛೇರಿ ವಿಳಾಸಕ್ಕೆ ಜಾರಿಯಾಗಿದೆ ಎಂದರೆ ಸರಿಯಲ್ಲ. ನೋಟೀಸುಗಳು ನಮಗೆ ಜಾರಿಯಾಗಿದ್ದರೂ ಸಹ ಅದರ ಬಗ್ಗೆ 2025ರಲ್ಲಿ ಮಾಹಿತಿ ತಿಳಿದು ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತ ಅರ್ಜಿಯಲ್ಲಿ

ತಿಳಿಸಿರುವ ವಿಳಾಸಕ್ಕೆ ಮೊದಲನೇಯ ಅಮಲ್ಜಾರಿ ಅರ್ಜಿಯಲ್ಲಿನ ನೋಟೀಸು ಜಾರಿಯಾಗಿದೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಸಂಪೂರ್ಣ ಮಾಹಿತಿ ಗೊತ್ತಿದ್ದರೂ ಸಹ ವಿನಾಃ ಕಾರಣ ವಿಳಂಬ ಮಾಡುವ ಉದ್ದೇಶದಿಂದ ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಪರಿಹಾರ ಅರ್ಜಿಯಲ್ಲಿ ಆದ ಆದೇಶ ಮತ್ತು ಅಮಲ್ಜಾರಿ ಅರ್ಜಿ ಸಲ್ಲಿಸಿದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1ರಿಂದ 3ನೇ ಎದುರುದಾರರಿಗೆ ಪರಿಹಾರ ಸಿಗುವುದನ್ನು ವಿಳಂಬ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕಂಪನಿಯ ಆಂತರಿಕ ವ್ಯವಹರಣೆಯಲ್ಲಿ ತೊಂದರೆ ಆಗಿದ್ದು, ಅದನ್ನು ಮರೆಮಾಚಲು ನೋಟೀಸು ಜಾರಿಯಾಗಿಲ್ಲ ಎಂದು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಪ್ರಸ್ತುತ ಅರ್ಜಿಯಲ್ಲಿ ಕೋರಿದ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**